# ಕರ್ನಾಟಕ ವಿಧಾನ ಪರಿಷತ್ತು

<table>
<tr><td colspan="2">ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ</td><td>1022</td></tr>
<tr><td colspan="2">ಮಾನ್ಯ ಸದಸ್ಯರ ಹೆಸರು</td><td>ಶ್ರೀ ಬಲ್ಕೀಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು)</td></tr>
<tr><td colspan="2">ಉತ್ತರಿಸುವ ಸಚಿವರು</td><td>ಉನ್ನತ ಶಿಕ್ಷಣ ಸಚಿವರು</td></tr>
<tr><td colspan="2">ಉತ್ತರಿಸಬೇಕಾದ ದಿನಾಂಕ</td><td>17.03.2025</td></tr>
<tr><td colspan="2">ಪ್ರಶ್ನೆ</td><td>ಉತ್ತರ</td></tr>
<tr><td>ಅ)</td><td>ಕುವೆಂಪು ವಿಶ್ವವಿದ್ಯಾಲಯದಿಂದ ನಡೆಸಲಾಗುತ್ತಿರುವ ದೂರ ಶಿಕ್ಷಣ ಕೋರ್ಸ್‌ಗಳ ಸಂಖ್ಯೆ ಎಷ್ಟು; ಮತ್ತು ಅವು ಯಾವುವು;</td><td>ಕುವೆಂಪು ವಿಶ್ವವಿದ್ಯಾಲಯವು 2019-20ನೇ ಶೈಕ್ಷಣಿಕ ಸಾಲಿನವರೆಗೆ ಓ.ಡಿ.ಎಲ್ ಮಾದರಿ 31 ದೂರ ಶಿಕ್ಷಣ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ನಡೆಸಲಾಗುತ್ತಿತ್ತು. ಅವುಗಳ ವಿವರ ಈ ಕೆಳಕಂಡಂತಿದೆ;<br><br><table><tr><th>ಸ್ನಾತಕ ಕೋರ್ಸ್</th><th>ಸ್ನಾತಕೋತ್ತರ ಕೋರ್ಸ್</th></tr><tr><td>ಬಿ.ಎ., ಬಿ.ಎಸ್ಸಿ, ಬಿ.ಕಾಂ., ಬಿ.ಬಿ.ಎ., ಬಿ.ಎಲ್.ಐಎಸ್ಸಿ.</td><td>ಎಂ.ಎಲ್.ಐಎಸ್ಸಿ, ಎಂಕಾಂ, ಎಂ.ಬಿ.ಎ. ಕನ್ನಡ, ಉರ್ದು, ಹಿಂದಿ, ಸಂಸ್ಕೃತ, ಇಂಗ್ಲೀಷ್, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ, ಎಂ.ಎ. ಶಿಕ್ಷಣ, ಎಂಸ್ಸಿ, ಗಣಿತಶಾಸ್ತ್ರ, ರಸಾಯನ ಶಾಸ್ತ್ರ, ಅನ್ವಯಿಕ ಸಸ್ಯಶಾಸ್ತ್ರ, ಅನ್ವಯಿಕ ಪ್ರಾಣಿ ಶಾಸ್ತ್ರ, ಭೌತಶಾಸ್ತ್ರ, ಜೈವಿಕ ತಂತ್ರಜ್ಞಾನ, ಅನ್ವಯಿಕ ರಸಾಯನಶಾಸ್ತ್ರ, ಪರಿಸರ ವಿಜ್ಞಾನ.<br><br>ಪಿ.ಜಿ. ಡಿಪ್ಲೋಮ ಕೋರ್ಸ್‌ಗಳು : ಪಿ.ಜಿ. ಡಿಪ್ಲೋಮ ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್, ಪಿ.ಜಿ. ಡಿಪ್ಲೋಮ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್, ಪಿ.ಜಿ ಡಿಪ್ಲೋಮ ಹೆಚ್.ಆರ್.ಎಂ, ಪಿ.ಜಿ. ಡಿಪ್ಲೋಮ ಜರ್ನಲಿಸಂ, ಪಿ.ಜಿ. ಡಿಪ್ಲೋಮ ಕನ್ನಡ ಕಂಪ್ಯೂಟರ್.</td></tr></table></td></tr>
<tr><td>ಆ)</td><td>ಸದರಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಡೆಯುತ್ತಿದೆಯೇ; ಹೌದಾದಲ್ಲಿ ಯಾವ ಯಾವ ಏಜೆನ್ಸಿಗಳ ಮೂಲಕ ಪ್ರವೇಶ ನಡೆಯುತ್ತಿದೆ.</td><td>ಕುವೆಂಪು ವಿಶ್ವವಿದ್ಯಾಲಯವು 2020ನೇ ಸಾಲಿನಿಂದ ದೂರ ಶಿಕ್ಷಣ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ನಡೆಸುತ್ತಿರುವುದಿಲ್ಲ.</td></tr>
<tr><td>ಇ)</td><td>ಸರ್ಕಾರ ಹಾಗೂ ಯು.ಜಿ.ಸಿ ಆದೇಶಗಳನ್ವಯ ಸದರಿ ವಿಶ್ವವಿದ್ಯಾಲನಿಲಯದಲ್ಲಿ ದೂರ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ನಿರ್ಬಂಧವಿರುವುದು ನಿಜವೇ;</td><td>ರಾಜ್ಯ ಸರ್ಕಾರವು ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 35 ಶಾಸನ 2020 ದಿನಾಂಕ:19-09-2020, ಆಧ್ಯಾದೇಶ ಸಂಖ್ಯೆ:11 ರಲ್ಲಿ ಓ.ಡಿ.ಎಲ್ ಮಾದರಿಯ ದೂರಶಿಕ್ಷಣ ನಡೆಸುವುದನ್ನು ನಿರ್ಬಂಧಿಸಿರುತ್ತದೆ.<br><br>ಮುಂದುವರೆದು, ಯು.ಜಿ.ಸಿಯು ತನ್ನ ಪತ್ರ ಸಂಖ್ಯೆ:ಎಫ್.ನಂ.10-19/2024 (ಡಿ.ಇ.ಬಿ-1) ದಿನಾಂಕ:28.02.2025ರ ಪತ್ರದಲ್ಲಿ ಕುವೆಂಪು ವಿಶ್ವವಿದ್ಯಾಲಯದ ನ್ಯಾಕ್ ಮಾನ್ಯತೆ ಅವಧಿ ಮುಕ್ತಾಯಗೊಂಡಿರುವುದರಿಂದ ಫೆಬ್ರುವರಿ-2025ರ ಆವೃತ್ತಿಗೆ ಆನ್‌ಲೈನ್ ಪದವಿ ಕೋರ್ಸುಗಳಿಗೆ ಪ್ರವೇಶಾತಿ ತೆಗೆದುಕೊಳ್ಳದಂತೆ ತಿಳಿಸಿರುತ್ತದೆ.</td></tr>
</table>

| | | |
|---|---|---|
| ಈ) | ದೂರ ಶಿಕ್ಷಣ ಪ್ರವೇಶ ನಿರ್ಬಂಧವಿದ್ದರು ಸಹ MLS ಮೂಲಕ ತಂತ್ರಾಂಶ ಅಳವಡಿಸುವ ಕಾರಣವೇನು(ವಿವರ ನೀಡುವುದು) | ಕುವೆಂಪು ವಿಶ್ವವಿದ್ಯಾಲಯವು ದೂರ ಶಿಕ್ಷಣ ಪ್ರವೇಶ ನಡೆಸಲು ರಾಜ್ಯ ಸರ್ಕಾರ ಮತ್ತು ಯುಜಿಸಿ ನಿರ್ಬಂಧವಿರುವುದರಿಂದ, ಯಾವುದೇ ದೂರ ಶಿಕ್ಷಣ ಕೋರ್ಸ್‌ಗಳನ್ನು ನಡೆಸಿರುವುದಿಲ್ಲ.<br><br>ಆದರೆ, 2020-21ನೇ ಶೈಕ್ಷಣಿಕ ಅವಧಿಯಿಂದ ಯು.ಜಿ.ಸಿ (ಡಿ.ಇ.ಬಿ)ಯು 12 ಆನ್‌ಲೈನ್ ಪದವಿ ಕೋರ್ಸುಗಳನ್ನು ನಡೆಸಲು ಮಾನ್ಯತೆ ನೀಡಿದ್ದು, ಆನ್‌ಲೈನ್ ಪದವಿ ಕೋರ್ಸುಗಳನ್ನು ಪ್ರಾರಂಭಿಸಲಾಗಿತ್ತು. ಯು.ಜಿ.ಸಿ(ಡಿ.ಇ.ಬಿ) ರೆಗ್ಯುಲೇಷನ್-2020ರ Part-1 Annexure IXರಲ್ಲಿ ಆನ್ ಲೈನ್ ಪದವಿ ಕೋರ್ಸುಗಳನ್ನು LMS (Learning Management system) ತಂತ್ರಾಂಶದ ಮೂಲಕವೇ ನಿರ್ವಹಿಸುವಂತೆ ಉಲ್ಲೇಖಿಸಿರುವುದರಿಂದ ವಿಶ್ವವಿದ್ಯಾಲಯವು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ ನಿಯಮಾನುಸಾರ LMS ತಂತ್ರಾಂಶ ಅನುಷ್ಠಾನಗೊಳಿಸಲಾಗಿದೆ.<br><br>2020-21 ನೇ ಸಾಲಿನಿಂದ 03 ಆವೃತ್ತಿಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ತೆಗೆದುಕೊಂಡಿದ್ದು, ಆ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆ ನಿರ್ವಹಣೆಗೆ ಯು.ಜಿ.ಸಿ ರೆಗ್ಯುಲೇಷನ್ ಅನುಸಾರ LMS ಅನ್ನು ಕುವೆಂಪು ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುತ್ತದೆ. |
| ಉ) | MLS ಗುತ್ತಿಗೆದಾರರೊಂದಿಗೆ ವಿಶ್ವವಿದ್ಯಾಲಯವು ಮಾಡಿಕೊಂಡ ಕರಾರು ಒಪ್ಪಂದಗಳೇನು ಹಾಗೂ ಗುತ್ತಿಗೆ ಮೊತ್ತ ಎಷ್ಟು? (ಕರಾರು ಒಪ್ಪಂದ ಪ್ರತಿ ಒದಗಿಸುವುದು) | ಕುವೆಂಪು ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದ ಆನ್‌ಲೈನ್ ಕೋರ್ಸ್ಗಳ ನಿರ್ವಹಣೆಗೆ "Development Implementation and Maintenance of Learning Management System for Online Distance Learning Program" (LMS) ಸಾಫ್ಟ್ ವೇರ್‌ನ್ನು ಯುಜಿಸಿ ನಿಯಮಾನುಸಾರ ಅನುಷ್ಠಾನಗೊಳಿಸಲು (LMS) ಸಾಫ್ಟ್‌ವೇರ್ ಮೂಲಕ ಸೇವೆ ಒದಗಿಸಲು ಸೂಕ್ತ ಸಂಸ್ಥೆಯನ್ನು ಆಯ್ಕೆ ಮಾಡುವ ಸಲುವಾಗಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿ, L1 ಆಗಿ ಆಯ್ಕೆಗೊಂಡ M/s Pheme Software Pvt., Ltd., Bangalore, ಈ ಸಂಸ್ಥೆಯೊಂದಿಗೆ ರೂ. 96,00,000/- (ಶೇ. 18 ಜಿ.ಎಸ್.ಟಿ. ಹೊರತುಪಡಿಸಿ) ಗಳಿಗೆ ನಿಗದಿಪಡಿಸಿ, ಬಿಡ್ನ ಒಟ್ಟು ಮೊತ್ತವನ್ನು ಮೂರು ಹಂತದಲ್ಲಿ (60+20+20) ರಂತೆ ಪಾವತಿಸಲು ವಿಶ್ವವಿದ್ಯಾಲಯವು ಒಡಂಬಡಿಕೆ ಮಾಡಿಕೊಂಡಿರುತ್ತದೆ.<br><br>ಅದರನ್ವಯ ಸಂಸ್ಥೆಯವರು ಸಲ್ಲಿಸಿರುವ ಬಿಲ್ಲನ್ನು ಪರಿಶೀಲಿಸಿ, ಇ-ಟೆಂಡರ್ ಆಯ್ಕೆಯಾದ M/s Pheme Software Pvt. Ltd., Bangalore, ಸಂಸ್ಥೆಗೆ ಮೊದಲ ಹಂತದ (60- ಶೇ. 18 ಜಿ.ಎಸ್.ಟಿ. ಸಹಿತ) ಮೊತ್ತ ರೂ. 67,96,800/- ಗಳನ್ನು ವಿಶ್ವವಿದ್ಯಾಲಯದಿಂದ ಸಂಸ್ಥೆಗೆ ಪಾವತಿಮಾಡಲಾಗಿರುತ್ತದೆ. ಉಳಿದ ಎರಡು ಹಂತಗಳ ಮೊತ್ತ ಪಾವತಿಗೆ ಬಾಕಿ ಉಳಿಸಿಕೊಂಡಿದ್ದು, ಬೇರೆ ಯಾವುದೇ ಸಂಸ್ಥೆಗೆ/ಬೇರೊಬ್ಬರಿಗೆ ವಿಶ್ವವಿದ್ಯಾಲಯವು ಪಾವತಿಸಿರುವುದಿಲ್ಲ. |

ಸಂಖ್ಯೆ: ಇಡಿ 16 ಯುಎಸ್‌ವಿ 2025

Sudhakar M.C.

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು